2. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ.

31(510)

ಶ್ರೀ ಪ್ರಕಾಶ್ ಖಂಡ್ರೆ(ಭಾಲ್ಕಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

3) ಕಾರಂಜಾ ನದಿಯಿಂದ ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಸಲುವಾಗಿ 4.5 ಕೋಟಿ ರೂಪಾಯಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?

4) ಈ ಪ್ರಸ್ತಾಪನೆ ಯಾವ ಹಂತದಲ್ಲಿದೆ.

5) ಈ ಪ್ರಸ್ತಾವನೆಯನ್ನು ಕೈಗೊಳ್ಳದಿದ್ದರೆ ಭಾಲ್ಕಿಯಲ್ಲಿ ತೀವ್ರವಾದ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

1) ಬಂದಿದೆ.

2 ಮತ್ತು 3) ಈ ಪ್ರಸ್ತಾವನೆಯು ಕರ್ನಾಟಕ ಜಲ ಮಂಡಲಿಯ ಪರಿಶೀಲನೆಯಲ್ಲಿದೆ. ಸರ್ಕಾರಕ್ಕೆ ಪ್ರಸ್ತಾವನೆ ಬರಬೇಕಾಗಿದೆ.

4) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

5) ಹೌದು. ಪ್ರತಿ ವರ್ಷದಂತೆ ಈ ಬಾರಿಯು ಬೇಸಿಗೆಯಲ್ಲಿ ಬರಗಾಲ ಪರಿಹಾರ ಯೋಜನೆಯಡಿಯಲ್ಲಿ ಜಿಲ್ಲಾಧಿಕಾರಿಗಳಿಂದ ಹಣ ಪಡೆದು ತಾತ್ಕಾಲಿಕ ಒಡ್ಡು ನಿರ್ಮಿಸಿ ನೀರು ಸರಬರಾಜು ಮಾಡಲಾಗುವುದು.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರಿಸಿದ್ದಾರೆ. ಆದರೆ ಇವತ್ತಿನವರೆಗೂ ಕೂಡ ಈ ಸಮಸ್ಯೆಯನ್ನು ಬಗೆಹರಿಸಲು ಕೇವಲ ತಾತ್ಕಾಲಿಕವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆಯೇ ವಿನಃ ಇದಕ್ಕೊಂದು ಖಾಯಂ ಪರಿಹಾರ ಒದಗಿಸುವ ಕೆಲಸ ಕಾರ್ಯಗತವಾಗಿಲ್ಲ. ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು 4 ಕೋಟಿ 50 ಲಕ್ಷ ರೂಪಾಯಿಗಳ ವೆಚ್ಚದ ಯೋಜನೆ ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದು ಈಗಾಗಲೇ ಒಂದೂವರೆ ವರ್ಷವಾಗಿದೆ. ಇವತ್ತಿನವರೆಗೂ ಅದು ಯಾವ ಹಂತದಲ್ಲಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸುತ್ತಿಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ಭಾಲ್ಕಿ ಪಟ್ಟಣಕ್ಕೆ ಈಗಾಗಲೇ 1 ಕೋಟಿ 82 ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ಸಿದ್ಧಪಡಿಸಿ ಅದನ್ನು ಕಾರ್ಯಗತಗೊಳಿಸಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ. ಆದರೆ ಈಗ ಭಾಲ್ಕಿ ಸುಮಾರು 40-50 ಸಾವಿರ ಜನಸಂಖ್ಯೆ ಹೆಚ್ಚಾಗಿರುವುದರಿಂದ ಅಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಅದನ್ನು ನಿವಾರಿಸಲು ಒಂದು ವಿಶೇಷವಾದಂತಹ ಯೋಜನೆಯನ್ನು ತಯಾರಿಸಿ ಅದಕ್ಕೆ ಮಂಜೂರಾತಿ ಕೊಡಬೇಕೆಂದು ಮಾನ್ಯ ಶಾಸಕರು ಕೋರುತ್ತಿದ್ದಾರೆ. ಈಗಾಗಲೇ ನಾವು 4.5 ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಇದಕ್ಕಾಗಿ ಸಿದ್ಧಪಡಿಸಿದ್ದೇವೆ. ಅದನ್ನು ಇನ್ನೂ ಕೂಡ ನಾವು ಪರಿಶೀಲಿಸಬೇಕಾಗಿದೆ. ನಮ್ಮ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು ಅದಕ್ಕೆ ನಾವು ಮಂಜೂರಾತಿಯನ್ನು ನೀಡುತ್ತೇವೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಸಚಿವರು ಆ ಪ್ರಸ್ತಾವನೆಗೆ ಯಾವಾಗ ಮಂಜೂರಾತಿಯನ್ನು ನೀಡುತ್ತಾರೆ ಎಂದು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಹಾಲಿ ನಮ್ಮ ಮುಂದಿರುವ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ, ನಮ್ಮ ಹಣಕಾಸಿನ ಅನುಕೂಲತೆಗಳನ್ನು ನೋಡಿಕೊಂಡು ಅದಕ್ಕೆ ಮಂಜೂರಾತಿಯನ್ನು ನೀಡುತ್ತೇವೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ಭಾಲ್ಕಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಸರ್ಕಾರವೇ ಪ್ರಶ್ನೆಗೆ ಉತ್ತರ ನೀಡುತ್ತಾ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಅಲ್ಲಿ ಮೈನ್ ರಿಸರ್ವಾಯರ್‌ಗೆ 10 ಹೆಚ್.ಪಿ. ಮೋಟಾರ್‌ಬಳಸಿ ಡೈರೆಕ್ಟಾಗಿ ಇಲ್ಲೀಗಲ್ ಕನೆಕ್ಷನ್ ಕೊಟ್ಟಿದ್ದಾರೆ. ಮೈನ್ ರಿಸರ್ವಾಯರ್‌ಗೆ ಹೋಗುವಂತಹ 10 ಇಂಚು ಪೈಪಿನಿಂದ 5 ಇಂಚಿನ ಪೈಪಿಗೆ ಡೈರೆಕ್ಟಾಗಿ ಇಲ್ಲೀಗಲ್ ಕನೆಕ್ಷನ್ ಕೊಟ್ಟಿದ್ದಾರೆ. ಮಾನ್ಯ

ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಮಾನ್ಯ ಸಚಿವರುಗಳಿಗೆ ನಾನು ಇದರ ಬಗ್ಗೆ ಈಗಾಗಲೇ ತಿಳಿಸಿದ್ದೇನೆ. ಆದರೂ ಕೂಡ ಇವತ್ತಿನವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ರೀತಿಯ ಇಲ್ಲೀಗಲ್ ಕನೆಕ್ಷನ್ ಇದ್ದರೆ ಬಡ ಜನರಿಗೆ ನೀರು ಎಲ್ಲಿಂದ ಸಿಗಬೇಕು? ಇದರ ಬಗ್ಗೆ ನಾನು ಜಲ ಮಂಡಳಿಯ ಎಂ.ಡಿ.ಯವರ ಜೊತೆಗೂ ಸಹಾ ಮಾತನಾಡಿದ್ದೇನೆ. ಇದರ ಬಗ್ಗೆ ಸರ್ಕಾರ ಏನಾದರೂ ನಿರ್ಧಾರ ತೆಗೆದುಕೊಂಡು ಈ ಇಲ್ಲೀಗಲ್ ಕನೆಕ್ಷನ್ ಅನ್ನು ಕಟ್ ಮಾಡಿದರೆ ಮಾತ್ರ ಜನರಿಗೆ ನೀರು ಸಿಗುತ್ತದೆ ಇಲ್ಲದಿದ್ದರೆ ಈ ಸಮಸ್ಯೆ ಇನ್ನೂ ಉಲ್ಬಣಗೊಳ್ಳುತ್ತದೆ. ಕಳೆದ 15 ದಿವಸಗಳಿಂದ ಭಾಲ್ಕಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಹೆಚ್ಚಾಗಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಲ್ಲೀಗಲ್ ಕನೆಕ್ಷನ್ಸ್ ಕೆಲವು ಕಡೆ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನು ಎಗ್ಸಿಕ್ಯೂಟಿವ್ ಇಂಜಿನಿಯರ್ ಒಬ್ಬರನ್ನು ಸ್ಥಳಕ್ಕೆ ಕಳುಹಿಸಿಕೊಟ್ಟು ಆ ತರಹ ಇಲ್ಲೀಗಲ್ ಕನೆಕ್ಷನ್ಸ್ ಮಾಡಿದ್ದರೆ ಅದನ್ನು ತೆಗೆಸುವಂತಹ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ಅಲ್ಲಿರುವ ಇಲ್ಲೀಗಲ್ ಕನೆಕ್ಷನ್ ಅನ್ನು ಇವತ್ತಿನವರೆಗೆ ಕಟ್ ಮಾಡಿಲ್ಲ. ಇಲಾಖೆಯ ಎಗ್ಸಿಕ್ಯೂಟಿವ್ ಇಂಜಿನಿಯರ್ ಅಲ್ಲಿಗೆ ಹೋಗಿ ಆ ಇಲ್ಲೀಗಲ್ ಕನೆಕ್ಷನ್ ಅನ್ನು ಕಟ್ ಮಾಡಲು ಬಿಡುತ್ತಿಲ್ಲ. ಈ ಬಗ್ಗೆ ಜಲ ಮಂಡಳಿಯ ಎಂ.ಡಿ.ಯವರೊಡನೆ ಮಾತನಾಡಿದರೆ ಅವರು ಈ ಬಗ್ಗೆ ನೀವೇ ಏನಾದರೂ ಪ್ರತಿಭಟನೆ ಮಾಡಿ, ಇದರ ಬಗ್ಗೆ ಒತ್ತಡ ತನ್ನಿ, ಭಾಲ್ಕಿಯಲ್ಲಿ ರ್ಯಾಲಿಯೊಂದನ್ನು ಮಾಡಿ ಎಂದು ಹೇಳುತ್ತಾರೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳದೇ ಹೋದರೆ ನಮ್ಮ ಭಾಲ್ಕಿ ಪಟ್ಟಣಕ್ಕೆ ನೀರೇ ಸಿಗುವುದಿಲ್ಲ. ಡಿ.ಸಿ.ಯವರೊಂದಿಗೆ ನಡೆಸಿದ ಮೀಟಿಂಗ್‌ನಲ್ಲೂ ಸಹಾ ಈ ವಿಷಯ ಪ್ರಸ್ತಾಪವಾಗಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಅಲ್ಲಿ ಅನಧಿಕೃತವಾದ ಸಂಪರ್ಕ ಏನಾದರೂ ಇದ್ದರೆ ಅದನ್ನು ತಕ್ಷಣವೇ ತೆಗೆಸಿ ಹಾಕುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಕುಂಬಾರ ವೃತ್ತಿಯ ನಶಿಸುವಿಕೆ ಕುರಿತು.

34(570)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ್): ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?